**ದಿನಾಂಕಃ 13−10−2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಆರೋಪಿ ಪರ ವಕೀಲರು ಸಲ್ಲಿಸಿದ ಮಧ್ಯಂತರ ಅರ್ಜಿ ಪುರಸ್ಕರಣೆ ಮೇರೆಗೆ**

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ**

4. ದಿಃ01.02.2018ರ ಬೆಳಗಿನ ಜಾವ 9 ಗಂಟೆಯಿಂದ 02.01.2018ರ ಬೆಳಗಿನ ಜಾವ 9.00 ಗಂಟೆಯವರೆಗೆ ನಾನು ಹಿಮ್ಸ್ ನ ತುರ್ತು ಚಿಕಿತ್ಸಾ ಘಟಕದಲ್ಲಿ ಕಾರ್ಯ ನಿರ್ವಹಿಸಿರುತ್ತೇನೆ. ಗಾಯಾಳು ಲಕ್ಷ್ಮಿ ದಿಃ02.01.2018ರ ಬೆಳಗಿನ ಜಾವ 1.30 ಗಂಟೆ ಸಮಯಕ್ಕೆ ಹಿಮ್ಸ್ ನ ತುರ್ತು ಚಿಕಿತ್ಸಾ ಘಟಕ್ಕೆ ಚಿಕಿತ್ಸೆಗಾಗಿ ಬಂದ ಕಾಲದಲ್ಲಿ ನಾನು ಹಿಮ್ಸ್ ತುರ್ತು ಚಿಕಿತ್ಸಾ ಘಟಕದಲ್ಲಿ ಕರ್ತವ್ಯದ ಮೇಲೆ ಇದ್ದೆ. ಗಾಯಾಳು ಲಕ್ಷ್ಮಿ ರವರನ್ನು ಚಿಕಿತ್ಸೆಗಾಗಿ ನಾನೇ ದಾಖಲ್ಮಾಡಿಕೊಂಡಿರುತ್ತೇನೆ. ಗಾಯಾಳು ಲಕ್ಷ್ಮಿಯ ಜೊತೆ ಆಕೆಯ ಸಹೋದರನಾದ ಯೋಗೇಶ್ ರವರು ಬಂದಿದ್ದರು. ಗಾಯಾಳುವಿಗೆ ಹೇಗೆ ಗಾಯಗಳು ಸಂಭವಿಸಿದವು ಎನ್ನುವ ಬಗ್ಗೆ ನಾನು ಗಾಯಾಳುವಿನ ಸಹೋದರನಾದ ಯೋಗೇಶ್ ರವರಿಂದ ಮಾಹಿತಿಯನ್ನು ಪಡೆದುಕೊಂಡಿರುತ್ತೇನೆ. ಹೊಳೇನರಸೀಪುರದ ಸರ್ಕಾರಿ ಆಸ್ಪತ್ರೆಯಿಂದ ಗಾಯಾಳು ಲಕ್ಷ್ಮಿಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಹಿಮ್ಸ್ ಗೆ ರೆಫರ್ ಮಾಡಲಾಗಿತ್ತು. ಹೊಳೇನರಸೀಪುರ ಸರ್ಕಾರಿ ಆಸ್ಪತ್ರೆಯಲ್ಲಿ ಗಾಯಾಳುವಿನ ಗಾಯಗಳಿಗೆ ಸಂಬಂಧಿಸಿದಂತೆ ನೀಡಲಾಗಿರುವ ವಿವರವನ್ನು ನಾನು ನೋಡಿಲ್ಲ ಆಸ್ಪತ್ರೆಯ ಸಿ ಎಂ ಒ ರವರು ನೋಡಿರುತ್ತಾರೆ. ಯೋಗೇಶ್ ರವರು ನೀಡಿರುವ ಗಾಯಾಳುವಿನ ಗಾಯಗಳ ವಿವರಣೆಯನ್ನು ಎಂ ಎಲ್ ಸಿ ಯಲ್ಲಿ ಸಿ ಎಂ ಒ ರವರು ನಮೂದಿಸುತ್ತಾರೆ. ಗಾಯಾಳು ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದ ಬಗ್ಗೆ ಪೊಲೀಸರಿಗೆ ಮಾಹಿತಿಯನ್ನು ಆಸ್ಪತ್ರೆಯ ಸಿ ಎಂ ಒ

ರವರು ನೀಡುತ್ತಾರೆ ನಾವು ನೀಡುವುದಿಲ್ಲ. ಗಾಯಾಳು ಲಕ್ಷ್ಮಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದ ಬಗ್ಗೆ ಹಿಮ್ಸ್ ಆಸ್ಪತ್ರೆಯಿಂದ ವೈದ್ಯರಿಗೆ ಮಾಹಿತಿ ನೀಡಲಾಗಿರುತ್ತದೆಯೋ, ಹೊಳೇನರಸೀಪುರ ಸರ್ಕಾರಿ ಆಸ್ಪತ್ರೆಯಿಂದ ಪೊಲೀಸರಿಗೆ ಮಾಹಿತಿ ನೀಡಲಾಗಿರುತ್ತದೆಯೋ ಎನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಗಾಯಾಳು ಲಕ್ಷ್ಮಿ ರವರಿಗೆ ಗಾಯಗಳು ಹೇಗೆ ಸಂಭವಿಸಿರುತ್ತವೆ ಎಂಬುದರ ಬಗ್ಗೆ ಚಿಕಿತ್ಸೆ ನೀಡುವ ಪೂರ್ವದಲ್ಲಿ ಗಾಯಾಳು ಲಕ್ಷ್ಮಿಯ ಸಹೋದರನಾದ ಯೋಗೇಶ್ ರವರು ನನಗೆ ಮಾಹಿತಿ ನೀಡಿರುತ್ತಾರೆ. ಗಾಯಾಳು ಲಕ್ಷ್ಮಿ ಚಿಕಿತ್ಸೆಗಾಗಿ ಹಿಮ್ಸ್ ದಾಖಲಾದಾಗ ಆಕೆಗೆ ಪ್ರಜ್ಞೆ ಇತ್ತು. ಗಾಯಾಳುವಿಗೆ ಸುಮಾರು ಶೇಕಡ 60 ರಿಂದ 65 ರಷ್ಟು ಪ್ರಮಾಣದ ಸುಟ್ಟ ಗಾಯಗಳು ಆಗಿದ್ದವು. ನಾನು ಆಸ್ಪತ್ರೆಯಲ್ಲಿ ಬರೆದಿರುವ ಗಾಯಾಳುವಿನ ಕೇಸ್ ಶೀಟ್ ನಲ್ಲಿ ಗಾಯಾಳು ಲಕ್ಷ್ಮಿಗೆ ಗಾಯಗಳು ಸ್ಟೌವ್ ಬರ್ಸ್ಟ್ ಆದ ಕಾರಣದಿಂದ ಸಂಭವಿಸಲಾಗಿರುತ್ತದೆ ಎಂದು ನಮೂದಿಸಲಾಗಿರುತ್ತದೆ ಸರಿ. ಗಾಯಾಳು ಲಕ್ಷ್ಮಿಯ ಎಂ ಎಲ್ ಸಿ ರಿಜಿಸ್ಟರ್ ಎಕ್ಸ್ ಟ್ರಾಕ್ಟ್ ನಲ್ಲಿ ಗಾಯಾಳು ಲಕ್ಷ್ಮಿಗೆ ಸ್ಟೌವ್ ಬರ್ಸ್ಟ್ ಆದ ಕಾರಣದಿಂದ ಸುಟ್ಟ ಗಾಯಗಳು ಸಂಭವಿಸಿವೆ ಎಂದು ಕಾಣಿಸಲಾಗಿದೆ ಎಂದರೆ ಸರಿ.

5. ದಿ:02.01.2018 ರಂದು ಹಿಮ್ಸ್ ನ ಸುಟ್ಟ ಗಾಯಗಳಿಗೆ ಚಿಕಿತ್ಸೆ ನೀಡುವ ವಾರ್ಡಿನಲ್ಲಿ ಎಷ್ಟು ಜನ ಗಾಯಾಳುಗಳು ದಾಖಲಾಗಿದ್ದರು ಎಂದು ನನಗೆ ಮಾಹಿತಿ ಇರುವುದಿಲ್ಲ. ಆ ದಿನ ಸದರಿ ವಾರ್ಡಿನಲ್ಲಿ ಎಷ್ಟು ಎಂ ಎಲ್ ಸಿ ಕೇಸುಗಳ ಗಾಯಾಳುಗಳು ದಾಖಲಾಗಿದ್ದರು ಎಂದು ನನಗೆ ಮಾಹಿತಿ ಇರುವುದಿಲ್ಲ. ಗಾಯಾಳುವಿಗೆ ಪೆಯಿನ್ ಕಿಲ್ಲರ್ ಔಷಧಿಯನ್ನು ನೀಡಿದ್ದು ಇದರಿಂದ ಗಾಯಾಳು ಪ್ರಜ್ಞಾಹೀನರಾಗಿರಲಿಲ್ಲ. ಗಾಯಾಳು ಲಕ್ಷ್ಮಿ ರವರ ಜೊತೆ ಆಕೆಯ ಸಹೋದರನಾದ ಯೋಗೇಶ್ ರವರನ್ನು ಹೊರತುಪಡಿಸಿ ಬೇರೆ

ಯಾರು ಆಸ್ಪತ್ರೆಗೆ ಬಂದಿದ್ದರು ಎನ್ನುವುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಶೇಕಡ 60-65 ರಷ್ಟು ಸುಟ್ಟ ಗಾಯಗಳು ಆಗಿದ್ದ ಕಾಲದಲ್ಲಿ ಗಾಯಾಳುಗಳು ಸಾಮಾನ್ಯವಾಗಿ ಅರೆಪ್ರಜ್ಞಾವಸ್ಥೆಯಲ್ಲಿದ್ದು ತಾವು ಏನು ಮಾತನಾಡುತ್ತಿದ್ದೇವೆ ಎಂದು ಅವರಿಗೆ ಅರಿವು ಇರುವುದಿಲ್ಲ ಎಂದರೆ ಎಲ್ಲಾ ಪ್ರಕರಣಗಳಲ್ಲಿ ಈ ರೀತಿ ಇರುವುದಿಲ್ಲ. ಗಾಯಾಳುವಿನ ದೇಹದ ಎಡಭಾಗಕ್ಕೆ ಸುಟ್ಟ ಗಾಯಗಳು ಸಂಭವಿಸಿದ್ದವು. ಗಾಯಾಳುವಿನ ಸುಟ್ಟ ಗಾಯಗಳಿಗೆ ನಾವು ಸಂಬಂಧಿಸಿದ ಚಿಕಿತ್ಸೆಯನ್ನು ನೀಡಿರುತ್ತೇವೆ. ಗಾಯಾಳುವಿನ ಎಡ ಹಸ್ತ ಸಂಪೂರ್ಣವಾಗಿ ಸುಟ್ಟು ಹೋಗಿರಲಿಲ್ಲ. ನಾನು ಗಾಯಾಳು ಲಕ್ಷ್ಮಿರವರನ್ನು ಪರೀಕ್ಷಿಸಿದಾಗ ಆಕೆಗೆ ಪ್ರಜ್ಞೆ ಇತ್ತು ಆಕೆ ವ್ಯಕ್ತಿಗಳನ್ನು ಗುರುತಿಸುವ ಸಾಮರ್ಥ್ಯ ಹೊಂದಿದ್ದಳು. ಗಾಯಾಳು ಲಕ್ಷ್ಮಿಗೆ ಶೇಕಡ 60-65 ರಷ್ಟು ಸುಟ್ಟ ಗಾಯಗಳು ಸಂಭವಿಸಿದ್ದ ಕಾರಣ ಆಕೆ ಅರೆಪ್ರಜ್ಞಾವಸ್ಥೆಯಲ್ಲಿದ್ದು ಆಕೆಗೆ ತಾನು ಏನು ಮಾತನಾಡುತ್ತಿದ್ದೇನೆ ಎಂಬ ಅರಿವು ಇರದಿದ್ದರೂ ಸಹ ನಾನು ಲಕ್ಷ್ಮಿ ಪ್ರಜ್ಞಾವಸ್ಥೆಯಲ್ಲಿದ್ದರು ಎಂದು ಪೊಲೀಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ಗಾಯಾಳುವಿಗೆ ಚಿಕಿತ್ಸೆ ನೀಡಿದ ಕಾಲದಲ್ಲಿ ಆಕೆಯ ದೇಹದ ಮೇಲೆ ಇದ್ದ ಬಟ್ಟೆಗಳು ಹಾಗೂ ಒಡವೆಗಳ ಬಗ್ಗೆ ನನಗೆ ನೆನಪಿಲ್ಲ. ಶೇಕಡ 60-65 ರಷ್ಟು ಸುಟ್ಟ ಗಾಯಗಳು ಆದ ವ್ಯಕ್ತಿಗೆ ಚಿಕಿತ್ಸೆ ನೀಡುವ ಪೂರ್ವದಲ್ಲಿ ಸಾಮಾನ್ಯವಾಗಿ ದೇಹದ ಮೇಲಿರುವ ಬಟ್ಟೆಗಳು ಹಾಗೂ ಆಭರಣಗಳನ್ನು ತೆಗೆದು ದೇಹವನ್ನು ಬೆಡ್ ನ ಬರ್ನ್ ಗೇಟ್ ಅಡಿಯಲ್ಲಿ ಇರಿಸಿ ಅದರ ಮೇಲೆ ಬೆಡ್ ಶೀಟ್ ಹೊದಿಸಿ ಚಿಕಿತ್ಸೆ ನೀಡಲಾಗುತ್ತದೆ. ಬರ್ನ್ ವಾರ್ಡಿನಲ್ಲಿ ಗಾಯಾಳುವಿಗೆ ನೀಡಬೇಕಾದ ಚಿಕಿತ್ಸೆಯ ವಿವರವನ್ನು ನಾವು ಬರೆದು ಕಳುಹಿಸುತ್ತೇವೆ. ಬರ್ನ್ ವಾರ್ಡಿನಲ್ಲಿರುವ ಇಂಟರ್ನ್ ಗಳು ಹಾಗೂ ನರ್ಸ್ ಗಳು

ಗಾಯಾಳುವಿಗೆ ಚಿಕಿತ್ಸೆಯನ್ನು ನೀಡುತ್ತಾರೆ. ನಾವು ಪ್ರತಿ ದಿನ 2 ಬಾರಿ ಬರ್ನ್ ವಾರ್ಡಿನ ರೌಂಡ್ ಗೆ ಹೋಗಿ ಗಾಯಾಳುವನ್ನು ಪರೀಕ್ಷಿಸುತ್ತೇವೆ. ನಾವು ಗಾಯಾಳುವನ್ನು ಗಾಯಾಳುವಿನ ಬಳಿ ಹೋಗಿ ಗಾಯಾಳುವನ್ನು ನೋಡಿ ಪರೀಕ್ಷಿಸುತ್ತೇವೆ.

7. ದಿಃ02.01.2018ರ ಬೆಳಗಿನ ಜಾವ 1.30 ಗಂಟೆ ಯಿಂದ ಆ ದಿನ ಮಧ್ಯಾಹ್ನ 12.00 ಗಂಟೆಯವರೆಗೂ ಗಾಯಾಳು ಲಕ್ಷ್ಮಿರವರಿಗೆ ಬರ್ನ್ ವಾರ್ಡಿನಲ್ಲಿ ಚಿಕಿತ್ಸೆ ನೀಡಲಾಗಿರುತ್ತದೆ. ಗಾಯಾಳುವನ್ನು ನಾವು ವಾರ್ಡಿನಲ್ಲಿ ಮೊದಲನೆ ರೌಂಡ್ ಅಂದರೆ ಬೆಳಿಗ್ಗೆ 9 ಗಂಟೆ ಸುಮಾರಿಗೆ ಪರೀಕ್ಷಿಸುತ್ತೇವೆ 2ನೆಯ ರೌಂಡ್ ಸುಮಾರು ಮಧ್ಯಾಹ್ನ 2.30 ಗಂಟೆ ಸಮಯಕ್ಕೆ ಬರುತ್ತದೆ. ಗಾಯಾಳು ಲಕ್ಷ್ಮಿಗೆ ಚಿಕಿತ್ಸೆ ನೀಡಿದಾಗ ಆಕೆಯ ದೇಹದ ಮೇಲೆ ಬಟ್ಟೆ ಇರಲಿಲ್ಲ. ಗಾಯಾಳುವಿಗೆ ಬೆಳಿಗ್ಗೆ ಚಿಕಿತ್ಸೆ ನೀಡಿದಾಗ ವೈದ್ಯಕೀಯ ಸಿಬ್ಬಂದಿಯನ್ನು ಹೊರತುಪಡಿಸಿ ಬೇರೆ ಯಾರೂ ಗಾಯಾಳುವಿನ ಬಳಿ ಬಂದಿರಲಿಲ್ಲ ಎಂದರೆ ನನಗೆ ತಿಳಿದಿಲ್ಲ. ಗಾಯಾಳುವಿಗೆ ಚಿಕಿತ್ಸೆ ನೀಡಿದ ಕಾಲದಲ್ಲಿ ಆಕೆ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ಗಾಯಾಳುವನ್ನು ನೀವು ಚಿಕಿತ್ಸೆ ನೀಡುತ್ತಿದ್ದ ಕಾಲದಲ್ಲಿ ಬೇರೆ ಯಾರಾದರೂ ವ್ಯಕ್ತಿಗಳು ಅವರನ್ನು ಮಾತನಾಡಿಸಲು ಬಂದಿರುತ್ತಾರೋ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿದಾರರು ತನಗೆ ತಿಳಿದಿಲ್ಲ ಎಂದು ಉತ್ತರಿಸಿರುತ್ತಾರೆ. ಗಾಯಾಳುವಿಗೆ ಚಿಕಿತ್ಸೆ ನೀಡುವ ಪೂರ್ವದಲ್ಲಿ ಅಕೆಗೆ ಹೇಗೆ ಗಾಯಗಳು ಸಂಭವಿಸಿರುತ್ತವೆ ಎಂದು ನಾನು ಗಾಯಾಳು ಲಕ್ಷ್ಮಿಯನ್ನು ಕೇಳಿದ್ದು ಆಕೆ ಸ್ಟೌವ್ ಬರ್ಸ್ಟ್ ಅದ ಕಾರಣ ನನಗೆ ಗಾಯ ಆಗಿರುತ್ತವೆ ಎಂದು ತಿಳಿಸಿರುತ್ತಾಳೆ. ಗಾಯಾಳು ಲಕ್ಷ್ಮಿ ನಿಮ್ಮನ್ನು ಹೊರತುಪಡಿಸಿ ಬೇರೆಯವರ ಜೊತೆ ಮಾತನಾಡಿಲ್ಲ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿದಾರರು ತನಗೆ ತಿಳಿದಿಲ್ಲ ಎಂದು ಉತ್ತರಿಸಿರುತ್ತಾರೆ. ಗಾಯಾಳು ಲಕ್ಷ್ಮಿ ಚಿಕಿತ್ಸೆ ಪಡೆಯುತ್ತಿದ್ದ ಕಾಲದಲ್ಲಿ ನನ್ನ ಸಮಕ್ಷಮ

ಯಾರ ಜೊತೆ ಏನು ಮಾತನಾಡಿರುತ್ತಾಳೆ ಎನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಗಾಯಾಳುವಿಗೆ ಚಿಕಿತ್ಸೆ ನೀಡುತ್ತಿದ್ದ ಕಾಲದಲ್ಲಿ ಗಾಯಾಳು ಲಕ್ಷ್ಮಿ ನನ್ನ ಸಮಕ್ಷಮ ಯಾರ ಜೊತೆಯೂ ಮಾತನಾಡಿರುವುದಿಲ್ಲ ಎಂದರೆ ಸರಿ. ಗಾಯಾಳು ಲಕ್ಷ್ಮಿ ಹಿಮ್ಸ್ ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಕಾಲದಲ್ಲಿ ಆಕೆ ಹೆಚ್ಚಿನ ಚಿಕಿತ್ಸೆಗಾಗಿ ದೊಡ್ಡ ಆಸ್ಪತ್ರೆಗೆ ಹೋಗುವ ಪೂರ್ವದಲ್ಲಿ ನನ್ನ ಸಮಕ್ಷಮ ಬೇರೆ ಯಾರ ಜೊತೆಯೂ ಮಾತನಾಡಿಲ್ಲ ಎಂದರೆ ಸರಿ. ಗಾಯಾಳು ಲಕ್ಷ್ಮಿಯ ಜೊತೆ ಮಾತನಾಡುವ ಬಗ್ಗೆ ಬೇರೆ ಯಾರೂ ನನ್ನ ಅನುಮತಿ ಪಡೆದಿರುವುದಿಲ್ಲ. ಬೇರೆ ಯಾರೂ ಲಕ್ಷ್ಮಿಯ ಜೊತೆ ಮಾತನಾಡಲು ಆಸ್ಪತ್ರೆಗೆ ಬಂದಿಲ್ಲ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ಗಾಯಾಳು ಲಕ್ಷ್ಮಿ ಎಡಕೈಗೆ ಸುಟ್ಟ ಗಾಯ ಆಗಿದ್ದ ಕಾರಣ ಆಕೆಯ ಎಡಗೈನ ಚಲನೆ ಇರಲಿಲ್ಲ ಎಂದರೆ ಸರಿ. ಲಕ್ಷ್ಮಿ ನಿಮ್ಮ ಮುಂದೆ ನೀಡಿರುವ ಹೇಳಿಕೆಯನ್ನು ಹೊರತುಪಡಿಸಿ ಬೇರೆ ಯಾರ ಮುಂದೆಯೂ ಹೇಳಿಕೆ ನೀಡಿಲ್ಲ ಎಂದರೆ ಆಕೆ ತಹಶೀಲ್ದಾರ್ ರವರ ಮುಂದೆ ಆಕೆಯ ಹೇಳಿಕೆಯನ್ನು ನೀಡಿರುತ್ತಾಳೆ. ಗಾಯಾಳು ಲಕ್ಷ್ಮಿ ರವರ ಹೇಳಿಕೆಯನ್ನು ಹಾಸನದ ತಹಶೀಲ್ದಾರ್ ಆದ ಆರ್ ಬಿ ಶಿವಶಂಕರಪ್ಪ ದಾಖಲ್ಮಾಡಿರುತ್ತಾರೆ. ಗಾಯಾಳು ಲಕ್ಷ್ಮಿ ತಹಶೀಲ್ದಾರ್ ರವರ ಮುಂದೆ ಹೇಳಿಕೆ ನೀಡುವ ಕಾಲದಲ್ಲಿ ನಾನು ಸಹ ಹಾಜರಿದ್ದೆ. ಗಾಯಾಳು ಲಕ್ಷ್ಮಿ ತಹಶೀಲ್ದಾರ್ ರವರ ಮುಂದೆ ಹೇಳಿಕೆ ನೀಡುವ ಸ್ಥಿತಿಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ಲಕ್ಷ್ಮಿ ರವರು ತಹಶೀಲ್ದಾರ್ ರವರ ಮುಂದೆ ಹೊರತುಪಡಿಸಿ ಬೇರೆ ಯಾರ ಮುಂದೆಯೂ ಹೇಳಿಕೆ ನೀಡಿಲ್ಲ ಎಂದರೆ ಸರಿ. ಗಾಯಾಳು ಲಕ್ಷ್ಮಿ ತಹಶೀಲ್ದಾರ್ ರವರ ಮುಂದೆ ಸಹ ಯಾವುದೇ ಮರಣಪೂರ್ವ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಕೇಸಿನ ಬಗ್ಗೆ ನನಗೆ ಮಾಹಿತಿ ಇಲ್ಲದಿದ್ದರೂ ಸಹ ಪೊಲೀಸರ ಒತ್ತಾಯದ ಮೇರೆಗೆ ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆ: ಇಲ್ಲ</u>**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.